# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1042 (1266) |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 17-12-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಪ್ರೆಸ್ಟೀಜ್ ಟೆಕ್ ಪಾರ್ಕ್ 3 ಎಂಬ ಹೆಸರಿನಲ್ಲಿ 2014-15 ರಲ್ಲಿ ವರ್ತೂರು ಹೋಬಳಿಯ ಬೆಳಂದೂರು ಖಾನೆ ಗ್ರಾಮದ ಸರ್ವೆ ನಂಬರ್‌ಗಳಾದ 110/1, 110/2, 110/3 ರಲ್ಲಿ ನಿರ್ಮಿಸಿದ ವಾಣಿಜ್ಯ ಸಂಕೀರ್ಣದ ವಾಣಿಜ್ಯ ಬ್ಲಾಕ್‌ಗಳನ್ನು 135 ವಿವಿಧ ಗ್ರಾಹಕರುಗಳಿಗೆ ಸರ್ಕಾರ ನಿಗದಿಪಡಿಸಿದ ಮಾರ್ಗಸೂಚಿ ದರಕ್ಕಿಂತ ಕಡಿಮೆ ದರದಲ್ಲಿ ಮಾರಾಟ ನೋಂದಣಿ ಮಾಡಿರುವ ತಪ್ಪಿತಸ್ಥ ಅಧಿಕಾರಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಉದ್ದೇಶ ಪೂರ್ವಕವಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಅಧಿಕಾರಿಯನ್ನು ಅಮಾನತ್ತುಗೊಳಿಸದಿರಲು ಕಾರಣಗಳೇನು; | ಪ್ರೆಸ್ಟೀಜ್ ಟೆಕ್ ಪಾರ್ಕ್-III ಪ್ರಕರಣಕ್ಕೆ ಸಂಬಂಧಿಸಿದ ದಸ್ತಾವೇಜುಗಳು ಶಿವಾಜಿನಗರ ಉಪ ನೋಂದಣಿ ಕಛೇರಿಯಲ್ಲಿ 2014-15 ಮತ್ತು 2015-16ನೇ ಸಾಲಿನಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳಂದೂರು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಸರ್ವೆ ನಂ.110/1, 110/2, 110/3 ರ 8 ಎಕರೆ 7 ಗುಂಟೆಗಳ (ಹಾಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ) ಮಾರುಕಟ್ಟೆ ಮೌಲ್ಯ ಮಾರ್ಗ ಅಧಿಸೂಚನೆ ಸಂಖ್ಯೆ:ಸಿವಿಸಿ/01/2014-15 ರಲ್ಲಿ 11ನೇ ವಿಶೇಷ ಸೂಚಿಯಲ್ಲಿ ತಿಳಿಸಿರುವಂತೆ ದರ ನಿಗದಿಪಡಿಸದೆ, 134 ದಸ್ತಾವೇಜುಗಳಲ್ಲಿ ಶ್ರೀ ಮಹದೇವ್, ಉಪನೋಂದಣಾಧಿಕಾರಿ ಇವರು ಒಟ್ಟು 131 ದಸ್ತಾವೇಜುಗಳನ್ನು ನೋಂದಾಯಿಸಿದ್ದು ಮತ್ತು ಶ್ರೀಮತಿ ರಾಜೇಶ್ವರಿ ಹೆಗ್ಡೆ, ಉಪನೋಂದಣಾಧಿಕಾರಿ ಇವರು 03 ದಸ್ತಾವೇಜುಗಳನ್ನು ನೋಂದಾಯಿಸಿರುತ್ತಾರೆ.<br><br>ಸದರಿಯವರುಗಳ ವಿರುದ್ಧ ಈಗಾಗಲೇ ದಿನಾಂಕ:28-10-2019 ರಂದು ಜಂಟಿ ಇಲಾಖಾ ವಿಚಾರಣೆ ಆರಂಭಿಸಿರುವುದನ್ನು ಪ್ರಶ್ನಿಸಿ, ಶ್ರೀ ಆರ್.ಮಹದೇವ್, ಉಪನೋಂದಣಾಧಿಕಾರಿ ಇವರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ:1754/2023ನ್ನು ದಾಖಲಿಸಿದ್ದು, ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:100328/2023 ರಲ್ಲಿ ನೀಡಿರುವ ತೀರ್ಪಿನನ್ವಯ ಕ್ರಮವಹಿಸುವಂತೆ ದಿನಾಂಕ:20-03-2024 ರಂದು ತೀರ್ಪು ನೀಡಿರುತ್ತದೆ. |
| ಆ | ಸರ್ಕಾರಕ್ಕೆ ನಷ್ಟ ಉಂಟು ಮಾಡಬೇಕೆಂಬ ಕಾರಣದಿಂದಲೇ ಉದ್ದೇಶಪೂರ್ವಕರಿಗೆ ಪ್ಲಾನ್ ಮಾಡಿ ರೂ.103.5 ಕೋಟಿ ನಷ್ಟ ಉಂಟು ಮಾಡಿರುವ ಅಧಿಕಾರಿಯಿಂದಲೇ ಸದರಿ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | |

| | | |
|---|---|---|
| | | ಶ್ರೀಮತಿ ರಾಜೇಶ್ವರಿ ಹೆಗ್ಡೆ, ಉಪನೋಂದಣಾಧಿಕಾರಿ ಇವರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಳಗಾವಿ ಇಲ್ಲಿ ಅರ್ಜಿ ಸಂಖ್ಯೆ:10189/2020ನ್ನು ದಾಖಲಿಸಿದ್ದು, ದಿನಾಂಕ:28-10-2019 ರಂದು ಜಾರಿಮಾಡಿದ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿ, ಮಾನ್ಯ ನ್ಯಾಯಾಲಯವು ದಿನಾಂಕ:04-08-2022 ರಂದು ತೀರ್ಪು ನೀಡಿರುತ್ತದೆ.<br><br>ಸದರಿ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ:100328/2023 ಯನ್ನು ಸಲ್ಲಿಸಿದ್ದು, ಪ್ರಕರಣದ ವಿಚಾರಣೆಯಲ್ಲಿ ಮಾನ್ಯ ನ್ಯಾಯಾಲಯವು ಸರ್ಕಾರವು ಕೊರತೆ ರಾಜಸ್ವ ವಸೂಲಾತಿಗಾಗಿ ದಾಖಲಿಸಿರುವ ರಿಟ್ ಅಪೀಲು ಸಂಖ್ಯೆ:731/2020 ಪ್ರಕರಣದ ವಿಚಾರಣೆ ಬಾಕಿಯಿದ್ದು, ಸದರಿ ಪ್ರಕರಣದಲ್ಲಿ ಅಪೀಲು ತಿರಸ್ಕೃತಗೊಂಡಲ್ಲಿ ಪ್ರತಿವಾದಿ ನೋಂದಣಾಧಿಕಾರಿಗಳ ವಿರುದ್ಧ ಕ್ರಮವಹಿಸುವ ಮೂಲ ಉದ್ದೇಶವೇ ವಿಫಲಗೊಳ್ಳುತ್ತದೆ. ಆದ್ದರಿಂದ ಮುಂದಿನ ಆದೇಶದವರೆಗೆ ಪ್ರತಿವಾದಿ ನೋಂದಣಾಧಿಕಾರಿಗಳ ವಿರುದ್ಧ ಕ್ರಮವಹಿಸದಂತೆ ಮಾನ್ಯ ನ್ಯಾಯಾಲಯವು ಸರ್ಕಾರಕ್ಕೆ ಈ ಕೆಳಕಂಡಂತೆ ನಿರ್ದೇಶನ ನೀಡಿದೆ.<br><br>If the writ appeal filed by the State in W A No.731/2020 is dismissed, then, the very foundation for initiation of enquiry against the respondent would be taken away. In that view of the matter, we direct the appellant-State and it's authority not be proceed with enquiry against the respondent until further orders.<br><br>ಇಲಾಖಾ ವಿಚಾರಣೆಯನ್ನು ನಡೆಸದಂತೆ ಇರುವ ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ದಿನಾಂಕ:08-09-2025 ರಂದು ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ಮೆಮೊವನ್ನು ದಾಖಲಿಸಲಾಗಿದೆ. |

| | | |
|---|---|---|
| ಇ | 2014-15 ರಲ್ಲಿ ವರ್ತೂರು ಹೋಬಳಿಯ ಬೆಳಂದೂರು ಖಾನೆ ಗ್ರಾಮದ ಸರ್ವೆ ಸಂಖ್ಯೆಗಳಾದ 110/1, 110/2, 110/3 ರಲ್ಲಿ ನಿರ್ಮಿಸಿದ ವಾಣಿಜ್ಯ ಸಂಕೀರ್ಣದ ವಾಣಿಜ್ಯ ಬ್ಲಾಕ್‌ಗಳನ್ನು 135 ವಿವಿಧ ಗ್ರಾಹಕರುಗಳಿಗೆ ಸರ್ಕಾರವು ನಿಗದಿಪಡಿಸಿದ ಮಾರ್ಗಸೂಚಿಕ್ಕಿಂತ ಕಡಿಮೆ ದರದಲ್ಲಿ ಮಾರಾಟ ನೋಂದಣಿ ಮಾಡಿರುವುದು ಸಾಬೀತಾಗಿರುವುದರಿಂದ ಈ ನೋಂದಣಿಯನ್ನು ರದ್ದುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದ್ದು, ದಸ್ತಾವೇಜುಗಳ ನೋಂದಣಿ ರದ್ದುಪಡಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. |

**ಕಂಇ/398/ಎಂಎನ್‌ಎಸ್‌ಎ/2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು